

THE BEST EYE HOSPITAL IN KARNATAKA
RANKED #1 FOR MORE THAN A DECADE

# ರೆಟಿನೊಬ್ಲಾಸ್ಟೋಮ

CELEBRATING 40 YEARS IN EYE CARE

NARAYANA NETHRALAYA

your faith shall heal you

## ರೆಟಿನೊಬ್ಲಾಸ್ಟೋಮ ಎಂದರೇನು ?

ರೆಟಿನೊಬ್ಲಾಸ್ಟೋಮ ಎಂಬುದು ಒಂದು ಜೀವಕ್ಕೆ ಅಪಾಯಕಾರಿಯಾದ ಕ್ಯಾನ್ಸರ್ ಆಗಿದ್ದು, ಹೆಚ್ಚಾಗಿ ಮಕ್ಕಳಲ್ಲಿ ಕಾಣಬಹುದು. ಇದು ಕಣ್ಣಿನ ಅಕ್ಷಿಪಟಲದಲ್ಲಿ ಬೆಳೆಯುತ್ತದೆ. ಇದು ಕಣ್ಣಿನೊಳಗೆ ಇರುವ ಸಂವೇದನಾ ಪದರವಾಗಿದೆ. ಇದು ಯಾವುದೇ ಲಕ್ಷಣಗಳು ಕಂಡುಬರದ ಕಾರಣ ನಿಧಾನವಾಗಿ ಕಂಡು ಹಿಡಿಯಲಾಗುತ್ತದೆ.

ಕ್ಯಾನ್ಸರ್ ಇರುವ ಕಣ್ಣುಗಳು ಮೊದಲಿಗೆ ಸಾಮಾನ್ಯ ಕಣ್ಣುಗಳ ಹಾಗೆಯೇ ಇರುತ್ತವೆ. ಕ್ಯಾನ್ಸರ್ ತೀವ್ರಗೊಂಡಾಗ ಮಕ್ಕಳ ಕಣ್ಣುಗಳಲ್ಲಿ ಬಿಳಿ ಪ್ರತಿಬಿಂಬ ಕಂಡುಬರುತ್ತದೆ. ಇದು ಒಂದು ಅಥವಾ ಎರಡೂ ಕಣ್ಣುಗಳಲ್ಲೂ ಸಹ ಕಂಡುಬರಬಹುದು. ಕ್ಯಾನ್ಸರ್ ಗುರುತಿಸುವುದು ನಿಧಾನವಾಗುವುದರಿಂದ ಆ ಕಣ್ಣನ್ನು ಕೆಲವರಲ್ಲಿ ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಕೊನೆಯಲ್ಲಿ ಕಣ್ಣುಗಳು ಕೆಂಪಾಗಿ, ನೋವಿನಿಂದ ದಪ್ಪವಾಗಿ ಕಾಣಿಸಿಕೊಳ್ಳುತ್ತದೆ. ಕ್ಯಾನ್ಸರ್ ತೀವ್ರಗೊಂಡು ಮೆದುಳು ಅಥವಾ ದೇಹದ ಯಾವುದೇ ಭಾಗಕ್ಕೆ ಹರಡಿದರೆ ಪ್ರಾಣ ಹಾನಿಯಾಗಬಹುದು.

## ರೆಟಿನಾಬ್ಲಾಸ್ಟೋಮದ ಲಕ್ಷಣಗಳೇನು ?

ಕಣ್ಣಿನ ಪಾಪೆಯ ಹಿಂಭಾಗದಲ್ಲಿ ಬಿಳಿ ಪ್ರತಿಬಿಂಬದಂತೆ ಕಾಣುತ್ತದೆ. ಆಗಾಗ್ಗೆ ಸಂಭವಿಸುವ ಸಾಮಾನ್ಯ ಲಕ್ಷಣಗಳೆಂದರೆ:

ಸಾಮಾನ್ಯ ಲಕ್ಷಣ ಅಕ್ಷಿಪಟಲದ ಹಿಂದೆ ಬಿಳಿ ಪ್ರತಿಫಲಿತ (ಲ್ಯುಕೋಕೋರಿಯಾ).

ಮೆಳ್ಳೆಗಣ್ಣು ಅಥವಾ ಅಡ್ಡ ಕಣ್ಣುಗಳು (ಎರಡೂ ಕಣ್ಣುಗಳು ಒಂದೇ ದಿಕ್ಕಿನಲ್ಲಿ ನೋಡದಿದ್ದಾಗ).




## ರೆಟಿನೊಬ್ಲಾಸ್ಟೋಮ ಎಷ್ಟು ಸಾಮಾನ್ಯವಾಗಿದೆ.


ಪ್ರಪಂಚದಲ್ಲಿರುವ ಮಕ್ಕಳ ಕ್ಯಾನ್ಸರ್‌ನಲ್ಲಿ ರೆಟಿನೊಬ್ಲಾಸ್ಟೋಮ 3ನೇ ಸ್ಥಾನದಲ್ಲಿದ್ದು, ಹುಟ್ಟುವ ಇಪ್ಪತ್ತು ಸಾವಿರ ಮಕ್ಕಳಲ್ಲಿ ಒಂದು ಮಗುವಿಗೆ ಈ ತೊಂದರೆ ಸಂಭವಿಸಬಹುದಾಗಿದೆ. ಆದರೂ ಕೂಡ ಲಭ್ಯವಿರುವ ಪರಿಣಾಮಕಾರಿ ಚಿಕಿತ್ಸೆ ನೀಡುವ ಮೂಲಕ 95% ರಷ್ಟು ಕ್ಯಾನ್ಸರ್‌ನಿಂದ ಬಳಲುತ್ತಿರುವ ಮಕ್ಕಳ ಜೀವನವನ್ನು ಉಳಿಸಬಹುದಾಗಿದೆ.

## ರೆಟಿನೊಬ್ಲಾಸ್ಟೋಮಗೆ ಹೇಗೆ ಚಿಕಿತ್ಸೆ ನೀಡಲಾಗುವುದು ?

ರೆಟಿನೊಬ್ಲಾಸ್ಟೋಮವನ್ನು ಶಸ್ತ್ರಚಿಕಿತ್ಸೆ, ಲೇಸರ್, ಕಿಮೋತೆರೆಪಿ, ರೆಡಿಯೇಷನ್ (ವಿಕಿರಣಗಳು) ಮತ್ತು ಕ್ರಯೋ ಎಂಬ ವಿವಿಧ ರೀತಿಯ ಚಿಕಿತ್ಸೆಗಳನ್ನು ಹಲವು ತಂತ್ರಜ್ಞಾನಗಳ ಸಂಯೋಜನೆಯ ನೀಡುವ ಮೂಲಕ ಗುಣಪಡಿಸಬಹುದು. ಮೊದಲಿಗೆ ರೋಗಿಗೆ ಅರವಳಿಕೆ ಮದ್ದನ್ನು ನೀಡಿ ಕ್ರಮಬದ್ಧವಾಗಿ ಪರೀಕ್ಷೆ ಮಾಡುವ ಮೂಲಕ ಎಷ್ಟರ ಮಟ್ಟಿಗೆ ಕ್ಯಾನ್ಸರ್ ಇದೆ ಎಂದು ಗುರುತಿಸಲಾಗುವುದು ಜೊತೆಗೆ ಮತ್ತೆ ಕೆಲವರಿಗೆ ಬೋನ್‌ಮ್ಯಾರೊ ಮತ್ತು ಸಿ.ಎಸ್.ಎಫ್. ಪರೀಕ್ಷೆ ಹಾಗೂ ಎಂ.ಆರ್.ಐ ಸ್ಕ್ಯಾನ್‌ಗಳನ್ನು ಮಾಡಿಸುವುದರ ಮೂಲಕ ಕ್ಯಾನ್ಸರ್ ಕಣ್ಣಿನಲ್ಲಿ ಮಾತ್ರ ಇದೆಯೋ ಅಥವಾ ದೇಹದ ಇತರ ಭಾಗಕ್ಕೂ ಹರಡಿದೆಯೋ ಎಂಬುದನ್ನು ಖಚಿತಪಡಿಸಿಕೊಳ್ಳಲಾಗುವುದು.



ಮೊದಲು




ನಂತರ

ಕೆಲವು ಮಕ್ಕಳಲ್ಲಿ ಕ್ಯಾನ್ಸರ್ ತುಂಬ ತೀವ್ರಗೊಂಡಿದ್ದಾಗ ವೈದ್ಯರು ಆ ಕಣ್ಣನ್ನು ಸಂಪೂರ್ಣವಾಗಿ ತೆಗೆದು ಮಗುವಿನ ಜೀವ ಉಳಿಸುವರು. ಮಗುವಿನ ಕಣ್ಣು ಸಾಮಾನ್ಯರಂತೆ ಕಾಣಲು ಕೃತಕ ಕಣ್ಣನ್ನು ಮಗುವಿಗೆ ಅಳವಡಿಸಲಾಗುವುದು. ಮಗುವಿನ ಸುರಕ್ಷತೆಗಾಗಿ ಕಿಮೋತೆರೆಪಿ ಮತ್ತು ರೇಡಿಯೇಷನ್ ಚಿಕಿತ್ಸೆ ಇದರ ಜೊತೆಯಲಿ ನೀಡಲಾಗುತ್ತದೆ.

ವೈದ್ಯರಿಗೆ ಯಾವಾಗಲೂ ಮಗುವಿನ ಜೀವ ಉಳಿಸುವುದೇ ಗುರಿಯಾಗುರುತ್ತದೆ. ಮಗುವಿನ ಕಣ್ಣಿಗೆ ಕ್ಯಾನ್ಸರ್‌ನಿಂದಾಗಿ ತೊಂದರೆಯಾಗದಿದ್ದರೆ ಉತ್ತಮ ಪ್ರಯತ್ನಗಳನ್ನು ಹಾಕುವ ಮೂಲಕ ಮಗುವಿನ ಕಣ್ಣನ್ನು ಸಹ ಉಳಿಸಲು ಪ್ರಯತ್ನಿಸುತ್ತಾರೆ.





ಉಳಿಸು

ಜೀವನ|ಕಣ್ಣು|ದೃಷ್ಟಿ

## ರೆಟಿನೊಬ್ಲಾಸ್ಟೋಮ ಚಿಕಿತ್ಸೆಗೆ ಎಷ್ಟು ವೆಚ್ಚವಾಗಬಹುದು ?

ಈ ಚಿಕಿತ್ಸೆಯ ವೆಚ್ಚವು ಒಂದು ಕಣ್ಣು ಅಥವಾ ಎರಡು ಕಣ್ಣುಗಳಲ್ಲಿಯೂ ಸಹ ಕ್ಯಾನ್ಸರ್ ಇದೆಯೊ ಹಾಗೂ ಯಾವ ಹಂತದಲ್ಲಿದೆ ಎಂಬುದರ ಮೇಲೆ ನಿರ್ಧಾರವಾಗುತ್ತದೆ. ಹಾಗೇ ಯಾವ ರೀತಿಯ ಚಿಕಿತ್ಸೆಯನ್ನು ಅಂದರೆ ಕಿಮೋತೆರೆಪಿ, ಲೇಸರ್ಸ್, ಫ್ರೀಜಿಂಗ್ ಥೆರೆಪಿಗಳು ಮತ್ತು ಅರವಳಿಕೆ ಮದ್ದು ಹಾಗೂ ಶಸ್ತ್ರಚಿಕಿತ್ಸೆಯ ಮೇಲೆ ವೆಚ್ಚವು ಅವಲಂಬಿತವಾಗಿರುತ್ತದೆ. ಸಾಮಾನ್ಯವಾಗಿ ಒಂದು ವರ್ಷಕ್ಕೆ ಚಿಕಿತ್ಸೆಗಾಗಿ ಸುಮಾರು ನಲವತ್ತೈದು ಸಾವಿರದಿಂದ ಒಂದು ಲಕ್ಷ ರೂಗಳವರೆಗೆ ಖರ್ಚಾಗಬಹುದು.

## ಪೋಷಕರ ಪಾತ್ರವೇನು ?

ಚಿಕಿತ್ಸೆಯು ಉತ್ತಮ ಫಲಿತಾಂಶ ದೊರೆಯಬೇಕಾದರೆ ಪೋಷಕರು ದೃಢ ನಿರ್ಧಾರ ಮಾಡಿ ಸಂಪೂರ್ಣ ಪ್ರೋತ್ಸಾಹ ನೀಡಬೇಕು. ವೈದ್ಯರು ಯಾವ ರೀತಿಯ ಚಿಕಿತ್ಸೆಯನ್ನು ಮುಂದುವರಿಸಬೇಕು, ಮುಂದಿನ ಯೋಜನೆ ಏನು, ಯಾವ ಪರೀಕ್ಷೆಗಳನ್ನು ಪುನಃ ನೀಡಬೇಕಾಗುತ್ತದೆ. (ಅರವಳಿಕೆ ಮದ್ದನ್ನು ನೀಡಿ ಅಥವಾ ಹಾಗೆ) ಎಂಬುದನ್ನು ಪೋಷಕರ ಹತ್ತಿರ ಚರ್ಚಿಸುತ್ತಾರೆ. ಇದಕ್ಕೆ ಪೋಷಕರು ಸಹಕರಿಸಬೇಕು. ಅಗತ್ಯವಿದ್ದಾಗ ಪದೇ–ಪದೇ ಚಿಕಿತ್ಸೆಯನ್ನು ನೀಡಬೇಕಾಗುತ್ತದೆ. ಯಾವುದೇ ಕಾರಣಕ್ಕೂ ಪೋಷಕರು ಚಿಕಿತ್ಸೆಯನ್ನು ಮುಂದೂಡುವುದು ಅಥವಾ ನಿಲ್ಲಿಸುವುದಾಗಲಿ ಮಾಡಬಾರದು.

## ರೆಟಿನೊಬ್ಲಾಸ್ಟೋಮವುಳ್ಳ ಮಕ್ಕಳಿಗೆ ಯಾವ ರೀತಿಯ ಸಹಾಯ ಬೇಕಾಗುತ್ತದೆ ?

ಕ್ಯಾನ್ಸರ್ ಇರುವ ಮಕ್ಕಳು ಮತ್ತು ಅವರ ಪೋಷಕರು ಹೊರ ರಾಜ್ಯ/ಊರುಗಳಿಂದ ಹೆಚ್ಚಾಗಿ ಬಂದಿರುತ್ತಾರೆ. ಇಂತಹವರಿಗೆ ನಮ್ಮಲ್ಲಿರುವ ಸಲಹೆಗಾರರು ಅವರಿಗೆ ಯಾವ ರೀತಿಯ ಚಿಕಿತ್ಸೆಯನ್ನು ಯಾವ ಯಾವ ಹಂತದಲ್ಲಿ, ಎಷ್ಟು ಪ್ರಮಾಣದಲ್ಲಿ, ಯಾವ ಸಮಯದಲ್ಲಿ ನೀಡುತ್ತೇವೆ. ಅದಕ್ಕೆ ಅಪಾಯಿಂಟ್‌ಮೆಂಟ್ ನೊಂದಾಯಿಸಿಕೊಳ್ಳಬೇಕು, ಕಿಮೋತೆರೆಪಿ ಮತ್ತು ಎಂ.ಆರ್.ಐ. ಸ್ಕ್ಯಾನ್‌ಗಳನ್ನು ಆನ್‌ಕಾಲೆಜಿ ಮಾರ್ಗದರ್ಶನದ ಮೂಲಕ ಕೊಡಿಸುತ್ತೇವೆ ಎಂಬುದನ್ನು ಸೂಕ್ತ ರೀತಿಯಲ್ಲಿ ಅವರಿಗೆ ವಿವರಿಸಿ ಸಹಾಯ ಮಾಡಬೇಕು.

## ಆರ್ಥಿಕ ಸಹಾಯ:

ಯಾವುದೇ ಮಗು ಸಹ ಆರ್ಥಿಕ ಸಮಸ್ಯೆಯಿಂದಾಗಿ ರೆಟಿನೊಬ್ಲಾಸ್ಟೋಮ ಚಿಕಿತ್ಸೆಯಿಂದ ವಂಚಿತರಾಗಬಾರದೆಂಬ ಕಾರಣದಿಂದ ನಾವು ನಾರಾಯಣ ನೇತ್ರಾಲಯದಲ್ಲಿ ಬಯಸುತ್ತೇವೆ. ಹಣದ ಸಮಸ್ಯೆ ಇರುವ ಮಕ್ಕಳಿಗೆ ಸರ್ಕಾರ ಹಾಗೂ ಸರಕಾರೇತರೆ (ಎನ್.ಜಿ.ಓ) ಸಂಸ್ಥೆಗಳಿಂದ ಸಹಾಯ ಪಡೆದುಕೊಳ್ಳುವಂತೆ ನಾವು ಸೂಚಿಸುತ್ತೇವೆ. ಇಂತಹ ಒಂದು ಖಾಸಗಿ ಸಂಸ್ಥೆಯ ಹೆಸರು ಇಕ್ಶಾ.

## ಅನುವಂಶಿಕ ವಿಶ್ಲೇಷಣೆ ಮತ್ತು ಸಲಹೆ:

ಕೆಲವು ಸಂದರ್ಭಗಳಲ್ಲಿ ಈ ಕ್ಯಾನ್ಸರ್ ರೋಗವು ಅನುವಂಶಿಕವಾಗಿ ಬರುವ ಸಾಧ್ಯತೆ ಇರುತ್ತದೆ. ಅನುವಂಶಿಕ ವಿಶ್ಲೇಷಣೆಯಿಂದ ಈ ಮಗುವಿನ ಸಹೋದರ ಅಥವಾ ಸಹೋದರಿಯರಿಗೆ ಈ ರೋಗದ ಅಪಾಯವಿದೆಯೇ ಎಂಬುದು ತಿಳಿದು ಬರುತ್ತದೆ. ಈ ಮಾಹಿತಿಯಿಂದ ಕ್ಯಾನ್ಸರ್ ಇದ್ದಲ್ಲಿ ಅತೀ ಬೇಗ ಪತ್ತೆ ಹಚ್ಚಬಹುದಾಗಿದೆ. ಈ ಮಾಹಿತಿಯು ಕುಟುಂಬದ ಇತರ ಸದಸ್ಯರಲ್ಲಿ ಕ್ಯಾನ್ಸರ್ ಅನ್ನು ಮುಂಚಿನ ಹಂತದಲ್ಲಿ ಪತ್ತೆಹಚ್ಚಲು ಸಹಾಯ ಮಾಡುತ್ತದೆ ಮತ್ತು ಭವಿಷ್ಯದ ಮಗುವಿಗೆ ಯೋಜಿಸಲು ಪೋಷಕರಿಗೆ ಸಹಾಯ ಮಾಡುತ್ತದೆ.

## ಇದೇ ತರಹ ತೊಂದರೆ ಇರುವ ಇತರ ಕುಟುಂಬಗಳೊಂದಿಗೆ ಸಂಪರ್ಕ ಒದಗಿಸುವುದು:

ನಮಗೆ ದೊರಕಿರುವ ರೆಟಿನೊಬ್ಲಾಸ್ಟೋಮ ಮಾಹಿತಿ ಆಧಾರದಿಂದ ಬೇರೆ ಬೇರೆ ಮಕ್ಕಳ ಪೋಷಕರುಗಳ ಜೊತೆ ಸಂಪರ್ಕವನ್ನು ಒದಗಿಸುವ ಮೂಲಕ ಅವರ ಭಾವನೆಗಳನ್ನು ಮತ್ತು ಮಾಹಿತಿಗಳನ್ನು ಹಂಚಿಕೊಳ್ಳುವುದರ ಮೂಲಕ ಈ ಕಾಯಿಲೆಯಿಂದ ಬಳಲುತ್ತಿರುವವರು ತಾವೊಬ್ಬರೇ ಅಲ್ಲವೆಂದು ಗುರುತುಪಡಿಸಿಕೊಳ್ಳಬಹುದು.

## ಹೆಚ್ಚಿನ ಜಾಗೃತಿ ಮೂಡಿಸುವುದರ ಮೂಲಕ ಈ ರೋಗವನ್ನು ಪ್ರಾಥಮಿಕ ಹಂತದಲ್ಲಿ ಕಂಡು ಹಿಡಿಯುವುದಕ್ಕೆ ಒತ್ತು ನೀಡುವುದು:

ನಮ್ಮ ರಾಷ್ಟ್ರದಲ್ಲಿ ಜನರಿಗೆ ಈ ಮಾರಕ ರೋಗದ ಬಗ್ಗೆ ಹೆಚ್ಚು ಅರಿವಿಲ್ಲದಿರುವುದು ದುರದೃಷ್ಟಕರವಾಗಿದೆ. ಈ ಕಾರಣದಿಂದ ಬಹಳಷ್ಟು ಮಕ್ಕಳು ಮುಂದುವರಿದ ಹಂತದಲ್ಲಿ ನಮ್ಮ ಸಲಹೆಗಾಗಿ ಬರುತ್ತಾರೆ. ಈ ರೋಗವು ಪ್ರಾರಂಭಿಕ ಹಂತದಲ್ಲಿ ಗುರುತಿಸಬೇಕಾದರೆ ಸಾಮೂಹಿಕ ಅರಿವನ್ನು ಹೆಚ್ಚಾಗಿಸಬೇಕಾಗಿದೆ. ಇದನ್ನು ನಾವು ಸಾಮಾನ್ಯ ಜನರಲ್ಲಿ ಹಾಗೂ ಆರೋಗ್ಯ ವೃತ್ತಿಪರರು ಹೆಚ್ಚು ಅರಿವು ಮೂಡಿಸಬೇಕೆಂದು ಆಶಿಸುತ್ತೇವೆ.


## ರೆಟಿನೊಬ್ಲಾಸ್ಟೋಮ ಸೇವೆಗಳಿಗೆ ಸಂಪರ್ಕಿಸಿ

**ಮೊಬೈಲ್ ಸಂಖ್ಯೆ: +91 9663387270/ +91 6364904487**

Dedicated Email – nn2feedback@narayananethralaya.com

(ರೆಟಿನೊಬ್ಲಾಸ್ಟೋಮ ರೋಗಿಗಳಿಗೆ ಸಂಯೋಜಕರು)

# ಅಕ್ಯುಲೋಪ್ಲಾಸ್ಟಿ

## ದೂರವಾಣಿ ಸಂಖ್ಯೆ:91–80–66121496

ನಮ್ಮ ವೆಬ್‌ಸೈಟ್ ಅನ್ನು ಭೇಟಿ ಮಾಡಲು
ಇಲ್ಲಿ ಸ್ಕ್ಯಾನ್ ಮಾಡಿ

ನಮ್ಮ ಶೈಕ್ಷಣಿಕ ವಿಡಿಯೋಗಳನ್ನು ವೀಕ್ಷಿಸಲು
ಇಲ್ಲಿ ಸ್ಕ್ಯಾನ್ ಮಾಡಿ


**ಎನ್.ಎನ್–1**

#121/ಸಿ, ಕಾರ್ಡ್ ರಸ್ತೆ, ರಾಜಾಜಿನಗರ, 1ನೇ 'ಆರ್' ಬ್ಲಾಕ್
ಬೆಂಗಳೂರು–560010, ಭಾರತ
ಟೆಲಿಫೋನ್:+91-80-66121643
ಅಕ್ಯುಲೋಪ್ಲಾಸ್ಟಿ ವಿಭಾಗ: +91–80–66121398
Email - infonn1@narayananethralaya.com

**ಎನ್.ಎನ್–2**

ನಾರಾಯಣ ಹೆಲ್ತ್‌ಸಿಟಿ (ನಾರಾಯಣ ಹೃದಯಾಲಯದ
ಆವರಣ) #258/ಎ, ಬೊಮ್ಮಸಂದ್ರ, ಹೊಸೂರು ರಸ್ತೆ,
ಬೆಂಗಳೂರು–560099, ಭಾರತ
ಟೆಲಿಫೋನ್: +91-80-66660655-0658
Email - infonn2@narayananethralaya.com

**ಎನ್.ಎನ್–3**

#1/1, 1ನೇ ಮುಖ್ಯರಸ್ತೆ, ಡಿಫೆನ್ಸ್ ಕಾಲೋನಿ, 100 ಅಡಿ ರಸ್ತೆ,
ಇಂದಿರಾನಗರ, ಬೆಂಗಳೂರು–560038, ಭಾರತ
ಟೆಲಿಫೋನ್: +91-80-66974000-4003
Email - infonn3@narayananethralaya.com

**ಎನ್.ಎನ್–4**

#63, ರಾಯಲ್ ಮೀನಾಕ್ಷಿ ಮಾಲ್ ಪಕ್ಕ, ಬನ್ನೇರುಘಟ್ಟ ರಸ್ತೆ,
ಹುಳಿಮಾವು, ಬೆಂಗಳೂರು–560076, ಭಾರತ
ಟೆಲಿಫೋನ್: +91-80-66121618-1619, +91 9513522400,
+91 9538822400
Email - infonn4@narayananethralaya.com

Nnethralaya

www.narayananethralaya.org